ಓಎಸ್ **191/2022**

**ಪಿ.ಡಬ್ಲ್ಯೂ: 01**

ದಿನಾಂಕಃ **05.06.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲು 2 ನೇ ಪ್ರತಿವಾದಿ ಪರ ಶ್ರೀ ಎಸ್ ಎನ್ ಎಲ್ ವಕೀಲರಿಂದಃ**

ನಾನು ಹಾಲಿ ಹಂಪಾಪುರದಲ್ಲಿ ವಾಸವಾಗಿದ್ದೇನೆ. ನಾನು ಹಂಪಾಪುರದಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ಹೊಸರಾಮನ ಹಳ್ಳಿಯಲ್ಲಿ ವಾಸವಾಗಿದ್ದ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನನ್ನ ತಾತನ ಹೆಸರು ಕಲ್ಲಹಳ್ಳಿ ಅಪ್ಪಾಜಿನಾಯಕ, ನನ್ನ ತಂದೆಯ ಹೆಸರು ಹಲಗಪ್ಪ. ನನ್ನ ತಂದೆಗೆ ನನ್ನನ್ನೂ ಸೇರಿ 10 ಜನ ಮಕ್ಕಳು. ನನ್ನ ಸಹೋದರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ದಾವಾಸ್ತಿಯ ಮೇಲೆ ನನಗೊಬ್ಬನಿಗೆ ಹಕ್ಕು ಇರುವುದಿಲ್ಲ ನನ್ನ ಸಹೋದರರಿಗೆ ಮೋಸ ಮಾಡುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ನನ್ನ ತಾತನಿಂದ ನನ್ನ ತಂದೆಗೆ ಬಂದಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ನನಗೆ ದಾವಾಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇದ್ದರೂ ಸಹ ದಾವಾಸ್ತಿ ನನಗೆ ಸೇರಬೇಕೆಂದು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನನ್ನ ಸ್ವಂತ ಅಕ್ಕ, 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಮಗಳು.

ನಾನು ವಾದಪತ್ರವನ್ನು ನನ್ನ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ನಾನು ವಾದಪತ್ರದಲ್ಲಿ ಪ್ರತಿವಾದಿಗಳು ಯಾರೆಂದು ಗೊತ್ತಿಲ್ಲ ಎಂದು 5 ನೇ ಕಂಡಿಕೆಯ 4 ನೇ ಸಾಲಿನಲ್ಲಿ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ವಾದಪತ್ರದ 1 ನೇ ಕಂಡಿಕೆಯಲ್ಲಿ 1 ನೇ ಪ್ರತಿವಾದಿ ನನ್ನ ಅಕ್ಕ ಎಂದು ಬರೆಸಿದ್ದೇನೆ ಎಂದರೆ ಸರಿ. ನಾನು 5 ನೇ ಕಂಡಿಕೆಯಲ್ಲಿ ಪ್ರತಿವಾದಿಗಳು ಪ್ರತಿವಾದಿಗಳು ಗೊತ್ತಿಲ್ಲ ಎಂದು ಹೇಳಿ ಬರೆಸಿರುವುದರಿಂದ ಹಾಗೂ ನನ್ನ ವಾಸ ಸ್ಥಳವನ್ನು ಸರಿಯಾಗಿ ಬರೆಸಿಲ್ಲದ ಕಾರಣ ಈ ದಾವೆಯಲ್ಲಿ ಕೋರಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನನ್ನ ತಂದೆ 1 ನೇ ಪ್ರತಿವಾದಿಗೆ ದಾವಾಸ್ತಿಯನ್ನು ದಾನಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ವಾದಪತ್ರದಲ್ಲಿ ಪ್ರತಿವಾದಿಗಳು ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಖಾತೆ ಮಾಡಿಸಿಕೊಂಡಿರುತ್ತಾರೆಂದು

ಬರೆಸಿಕೊಂಡಿರುತ್ತಾರೆ, ಈ ಸಂಬಂಧ ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ.

ನನ್ನ ತಂದೆಗೆ 10 ಜನ ಮಕ್ಕಳು ಎಂದು ವಾದಪತ್ರದಲ್ಲಿ ಬರೆಸಿರುವುದಿಲ್ಲ, ಆದ್ದರಿಂದ ನಾನು ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆಗೆ 10 ಜನ ಮಕ್ಕಳೆಂದು ತೋರಿಸಲು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಮತ್ತೊಮ್ಮೆ ಮುಂದುವರಿದು ನಿಪಿ1ನ್ನು ಹಾಜರುಪಡಿಸಿರುತ್ತೇನೆ ಎಂದು ಉತ್ತರಿಸುತ್ತಾರೆ. 1ನೇ ಪ್ರತಿವಾದಿಗೆ ದಾವಾಸ್ತಿ ಸ್ವಯಾರ್ಜಿತ ಆಸ್ತಿ ನನಗೆ ಅದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಕಾನೂನುಬದ್ಧವಾಗಿ 1ನೇ ಪ್ರತಿವಾದಿಯ ಹೆಸರಿಗೆ ದಾವಾಸ್ತಿಯ ಖಾತೆ ವರ್ಗಾವಣೆಯಾಗಿರುತ್ತದೆ, ಇದರಲ್ಲಿ ಕಂದಾಯ ಅಧಿಕಾರಿಗಳು ಶಾಮೀಲಾಗಿರುವುದಿಲ್ಲ ಎಂದರೆ ಸರಿಯಲ್ಲ. ಈಗ ಹಾಲಿ ದಾವಾಸ್ತಿಯಲ್ಲಿ ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ 10 ಜನ ಮಕ್ಕಳು ಎಂದು ನನ್ನ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. ದಾವಾಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಸಮಯಾವಕಾಶ ನೀಡಿ ಮುಂದುವರಿದ ಪಾಟೀಸವಾಲನ್ನು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಒಂದನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು, ಹುಣಸೂರು.